ಹರಿಕಥಾಮೃಥಸಾರ

ಕಅ ತಾರತಮ್ಯ ಸಂಧಿ

ಹರಿಕಥಾಮೃಥಸಾರ ಗುರುಗಳ ಕರುಣಧಿಮ್ಧಾಪನಿಥು ಪೇಳುವೆ
ಪರಮ ಭಗವಧ್ಭಕ್ಥರಿಧನಾಧರಧಿ ಕೇಳುವುಧು

ಶ್ರೀರಮಣ ಸವೇಶ ಸವಗ
ಸಾರಭೋಕ್ತ ಸ್ವತಂತ್ರ ದೋಷ ವಿ
ದೂರ  ಜ್ಞ್ಯಾನಾನಂದ ಬಲ ಐಶ್ವಯ ಗುಣಪೂಣ
ಮೂರು ಗುಣ ವಜಿತ ಸಗುಣ ಸಾ
ಕಾರ ವಿಶ್ವಸ್ಥಿತಿ ಲಯೋದಯ
ಕಾರಣ ಕೃಪಾಸಾಂದ್ರ ನರಹರೇ ಸಲಹೋ ಸಜ್ಜನರ ೩೨-೦೧

ನಿತ್ಯಮುಕ್ತಳೆ ನಿವಿಕಾರಳೆ
ನಿತ್ಯ ಸುಖಸಂಪೂಣೆ ನಿತ್ಯಾ
ನಿತ್ಯ ಜಗದಾ ಧಾರೆ ಮುಕ್ತಾಮುಕ್ತ ಗಣವಿನುತೆ
ಚಿತ್ತಯಿಸು ಬಿನ್ನಪವ ಶ್ರೀಪುರು
ಶೋತ್ತಮನ ವಓನಿವಾಸಿನೀ
ಭೃತ್ಯ ವತ್ಸಲೆ ಕಾಯೆ ತ್ರಿಜಗನ್ಮಾತೆ ವಿಖ್ಯಾತೆ ೩೨-೦೨

ರೋಮಕೂಪಗಳೊಳು ಪೃಥಕ್ಪೃಥ
ಗಾ ಮಹಾಪುರುಷನ ಸ್ವಮೂತಿಯ
ತಾಮರಸಜಾಂಡಗಳ ತದ್ಗತ ವಿಶ್ವರೂಪಗಳ

www.yousigma.com

ಶ್ರೀಮಹಿಳೆ ರೂಪಗಳ ಗುಣಗಳ
ಸೀಮೆಗಾಣದೆ ಯೋಚಿಸುತ ಮಮ
ಸ್ವಾಮಿ ಮಹಿಮೆಯದೆಂತುಟೆಂದಡಿಗಡಿಗೆ ಬೆರಗಾದೆ  ೩೨-೦೩

ಒಂದು ಜಾಂಡದೊಳೊಂದು ರೂಪ ದೊ
ಳೊಂದವಯವದೊಳೊಂದು ನಖದೊಳ
ಗೊಂದು ಗುಣಗಳ ಪಾರಗಾಣದೆ ಕೃಉತಪುಟಾಂಜಲಿಯಿಂ
ಮಂದಜಾಸನ ಪುಳಕಪುಳಕಾ
ನಂದಭಾಷ್ಪ ತೊದಲು ನುಡಿಗಳಿಂ
ದಿಂದಿರಾವಲ್ಲಭನ ಮಹಿಮೆ ಗಭೀರತರವೆಂದಾ ೩೨-೦೪

ಏನು ಧನ್ಯರೊ ಬ್ರಹ್ಮಗುರು ಪವ
ಮಾನರೀವರು ಈ ಪರಿಯಲಿ ರ
ಮಾನಿವಾಸನ ವಿಮಲ ಲಾವಣ್ಯಾತಿಶಯಗಳನು
ಸಾನುರಾಗದಿ ನೋಡಿ ಸುಖಿಪ ಮ
ಹಾನುಭಾವರ ಭಾಗ್ಯವೆಂತೊ ಭ
ವಾನಿಧವನಿಗಸಾಧ್ಯವೆನಿಸಲು ನರರ ಪಾಡೇನು  ೩೨-೦೫

ಆ ಪಿತಾಮಹ ನೂರು ಕಲ್ಪ ರ
ಮಾಪತಿಯ ಗುಣ ಜಪಿಸಿ ಒಲಿಸಿ ಮ
ಹಾಪರಾಕ್ರಮ ಹನುಮ ಭೀಮಾನಂದ ಮುನಿಯೆನಿಸಿ
ಆ ಪರಬ್ರಹ್ಮನ ಸುನಾಭಿ
ಕೂಪಸಂಭವ ನಾಮದಲಿ ಮೇರೆ

www.yousigma.com

ವಾ ಪಯೋಜಾಸನ ಸಮೀರರಿಗಭಿನಮಿಪೆ ನಿತ್ಯ ೩೨-೦೬

ವಾಸುದೇವನ ಮೂತಿ ಹೃದಯಾ
ಕಾಶಮಂಡಲ ಮಧ್ಯದಲಿ ತಾ
ರೇಶನಂದದಿ ಕಾಣುತತಿ ಸಂತೋಷದಲಿ ತುತಿಪ
ಆ ಸರಸ್ವತಿ ಭಾರತಿಯರಿಗೆ
ನಾ ಸತತ ವಂದಿಸುವೆ ಪರಮೋ
ಲ್ಲಾಸದಲಿ ಸು ಜ್ಞಾನ ಭಕುತಿಯ ಸಲಿಸಲೆಮಗೆಂದು ೩೨-೦೭

ಜಗದುದರನ ಸರ್ವೋತ್ತಮನ ನಿಜ
ಪೆಗಳೊಳಾಂತು ಕರಾಬ್ಜದೊಳ್ ಪದ
ಯುಗ ಧರಿಸಿ ನಖಪಂಕ್ತಿಯೊಳು ರಮಾಣೀಯತರವಾದ
ನಗಧರನ ಪ್ರತಿಬಿಂಬ ಕಾಣುತ
ಮಿಗೆ ಹರುಷದಿಂ ಪೊಗಳಿ ಹಿಗ್ಗುವ
ಖಗಕುಲಾಧಿಪ ಕೊಡಲಿ ಮಂಗಳ ಸಕಲ ಸುಜನರಿಗೆ  ೩೨-೦೮

ಯೋಗಿಗಳ ಹೃದಯಕೆ ನಿಲುಕ ನಿಗ
ಮಾಗಮೈಕ ವಿನುತನ ಪರಮಾನು
ರಾಗದಿಂ ದ್ವಿಸಹಸ್ರ ಜಿಹ್ವೆಗಳಿಂದ ವಣಿಸುವ
ಭೂ ಗಗನ ಪಾತಾಳ ವ್ಯಾಪ್ತನ
ಯೋಗ ನಿದ್ರಾಸ್ಪದ ನೆನಿಪ ಗುರು
ನಾಗರಾಜನ ಪದಕೆ ನಮಿಸುವೆ ಮನದೊಳನವರತ  ೩೨-೦೯

ನಮ್ಧಿವಾಹನ ನಳಿನಿಢರ ಮೌಲೇಮ್ಧು ಶೇಖರ ಶಿವಥ್ರಿಯಮ್ಬಕ
ಅಮ್ಢಕಾಸುವಮಠನ ಗಜಶಾದೂಲ ಚಮಢರಾ
ಮಮ್ಧಜಾಸನ ಥನಯ ಥ್ರಿಜಗಧ್ವಮ್ಧ್ಯ ಶುಧ್ಢ ಸ್ವತಿಕ
ಸನ್ನಿಭ ವಮ್ಧಿಸುವೆ ನನವರಥೆ ಪಾಲಿಸೊ ಪಾವಥಿರಮಣ ೩೨-೧೦

ಫಣಿ ಫಣಾಂಚಿತ ಮುಕುಟರಂಜಿತ
ಕ್ವಣಿತ ಡಮರು ತ್ರಿಶೂಲ ಶಿಖಿ ದಿನ
ಮಣಿ ನಿಶಾಕರ ನೇತ್ರ ಪರಮಪರವಿತ್ರ ಸುಚರಿತ್ರ
ಪ್ರಣತಕಾಮದ ಪ್ರಮಥ ಸುರಮುನಿ
ಗಣಸುಪೂಜಿತ ಚರಣಯುಗ ರಾ
ವಣಮದ ವಿಭಂಜನ ಸತತ ಮಾಂ ಪಾಹಿ ಮಹದೇವಾ ೩೨-೧೧

ದಅಯ ಜ್ಝ್ಯ ವಿಭಂಜನನೆ ವಿರು
ಪಾಅ ವೈರಾಗ್ಯಾಧಿಪತಿ ಸಂ
ರಇಸೆಮ್ಮೃನು ಸವಕಾಲದಿ ಸನ್ಮೃದವನಿತ್ತು
ಯಅಪತಿಸಖ ಯಜಪರಿಗೆ ಸುರ
ವೃಅ ವೃಕದನುಜಾರಿ ಲೋಕಾ
ಧ್ಯಅ ಶುಕ ದುವಾಸ ಜೈಗೀಷವ್ಯ ಸಂತಯಿಸು ೩೨-೧೨

ಹತ್ತು ಕಲ್ಪದಿ ಲವಣ ಜಲಧಿಯೊ
ಋುತ್ತಮ ಶ್ಲೋಕನ ಒಲಿಸಿ ಕ್ಇತ
ಕೃತ್ಯನಾಗಿ ಜಗತ್ಪತಿಯ ನೇಮದಿ ಕುಶಾಸ್ತ್ರಗಳ

ಬಿತ್ತರಿಸಿ ಮೋಹಿಸಿ ದುರಾತ್ಮರ
ನಿತ್ಯನಿರಯ ನಿವಾಸರೆನಿಸಿದ
ಕೃತ್ತಿವಾಸಗೆ ನಮಿಪೆ ಶೇಷಪದಾನಹುದೆಂದು ೩೨-೧೩

ಕಂಬುಪಾಣಿಯ ಪರಮಪ್ರೇಮ ನಿ
ತಂಬಿನಿಯರೆಂದೆನಿಪ ಲಅಣೆ
ಜಾಂಬವತಿ ಕಾಳಿಂದಿ ನೀಲಾ ಭದ್ರ ಸಖವಿಂದ
ರೆಂಬ ಷಣ್ಮಹಿಷಿಯರ ದಿವ್ಯ ಪ
ದಾಂಬುಜಗಳಿಗೆ ನಮಿಪೆ ಮಮ ಹೃದ
ಯಾಂಬರದಿ ನೆಲೆಸಲಿ ಬಿಡದೆ ತಮ್ಮರಸನೊಡಗೂಡಿ ೩೨-೧೪

ಆ ಪರಂತಪನೊಲುಮೆಯಿಂದ ಸ
ದಾಪರೋಇಗಳೆನಿಸಿ ಭಗವ
ದ್ರೂಪಗುಣಗಳ ಮಾಹಿಮೆ ಸ್ವಪತಿಗಳಾನನದಿ ತಿಳಿವ
ಸೌಪರಣಿ ವಾರುಣಿ ನಗಾತ್ಮಜ
ರಾಪನಿತು ಬಣ್ಣಿಸುವೆನೆನ್ನ ಮ
ಹಾಪರಾಧಗಳೆಣಿಸದಿಯಲಿ ಪರಮಮಂಗಳವ ೩೨-೧೫

ತ್ರಿದಿವತರು ಮಣಿ ಧೇನುಗಳಿಗಾ
ಸ್ಪದವೆನಿಪ ತ್ರಿದಶಾಲಯಾಬ್ಧಿಗೆ
ಬದರನಂದಲೊಪ್ಪುತಿಪ್ಪ ಉಪೇಂದ್ರ ಚಂದ್ರಮನ
ಮೃದು ಮಧುರ ಸುಸ್ತವದಿನದಿಂದಲಿ
ಮಧುಸಮಯ ಪಿಕನಂತೆ ಪಾಡುವ

www.yousigma.com

ಮುದಿರವಾಹನನಂಘ್ರಿಯುಗ್ಮಂಗಳಿಗೆ ನಮಿಸುವೆನು ೩೨-೧೬

ಕೃತಿರಮಣ ಪ್ರದ್ಯುಮ್ನ ದೇವನ
ಅತುಳ ಬಲ ಲಾವಣ್ಯ ಗುಣ ಸಂ
ತತ ಉಪಾಸನ ಕೇತುಮಾಲಾಖಂಡದೊಳು ರಚಿಪ
ರತಿ ಮನೋಹರನಂಘ್ರಿ ಕಮಲಕೆ
ನುತಿಸುವೆನು ಭಕುತಿಯಲಿ ಮಮ ದು
ಮತಿಯ ಕಳೆದು ಸನ್ಮತಿಯ ನೀಯಲಜಸ್ರ ಎಮಗೊಲಿದು ೩೨-೧೭

ಚಾರುತರ ನವವಿಧ ಭಕುತಿ ಗಂ
ಭೀರ ವಾರಾಶಿಯೊಳು ಪರಮೋ
ದಾರ ಮಹಿಮನ ಹೃದಯ ಫಣಿಪತಿ ಪೀಠದಲಿ ಭಜಿಪ
ಭೂರಿ ಕಮಾಕರನೆನಿಸುವ ಶ
ರೀರಮಾನಿ ಪ್ರಾಣಪತಿ ಪದ
ವಾರಿರುಹಕಾನಮಿಪೆ ಮದ್ಗುರುರಾಯನಹುದೆಂದು

ವಿತತಮಹಿಮನ ವಿಶ್ವತೋಮುಖ
ನತುಳ ಭುಜಬಲ ಕಲ್ಪತರುವಾ
ಶ್ರಿತರೆನಿಸಿ ಸಕಲೇಷ್ಟ ಪಡೆದನುದಿನದಿ ಮೋದಿಸುವ
ರತಿ ಸ್ವಯಂಭುವ ದಳ ವಾಚ
ಸ್ಪತಿ ಬಿಡೌಜನ ಮಡದಿ ಶಚಿ ಮ
ನ್ಮಥಕುಮಾರನಿರುದ್ಧರೆಮಗೀಯಲಿ ಸುಮಂಗಳವ ೩೨-೧೯

ಭವವನಧಿ ನವಪೋತ ಪುಣ್ಯ
ಶ್ರವಣ ಕೀತನ ಪಾದವನರುಹ
ಭವನ ನಾವಿಕನಾಗಿ ಭಜಕರ ತಾರಿಸುವ ಬಿಡದೆ
ಪ್ರವಹಮಾರುತದೇವ ಪರಮೋ
ತ್ಸವ ವಿಶೇಷ ನಿರಂತರ ಮಹಾ
ಪ್ರವಹದಂದಧಿ ಕೊಡಲಿ ಭಗವತ್ಭಕ್ತ ಸಂತತಿಗೆ ೩೨-೨೦

ಜನರನುದ್ಧರಿಸುವೆನೆನುತ ನಿಜ
ಜನಕನನುಮತದಲಿ ಸ್ವಯಂಭುವ
ಮನುವಿನಿಂದಲಿ ಪಡದೆ ಸುಕುಮಾರಕರನೊಲುಮೆಯಲಿ
ಜನನಿ ಶತರೂಪಾ ನಿತಂಬಿನಿ
ಮನವಾಚನ ಕಾಯದಲಿ ಬಿಡದನು
ದಿನ ನಮಿಸುವೆನು ಎಮಗೆ ಕೊಡು ಸಂಮಂಗಳವನೊಲಿದು ೩೨-೨೧

ನರನ ನಾರಾಯಣನ ಹರಿ ಕೃ
ಷ್ಣರ ಪಡೆದ ಪುರುಷಾಥ ತೆರದಲಿ
ತರಣಿ ಶಶಿ ಶತರೂಪರಿಗೆ ಸಮನೆನಿಸಿ ಪಾಪಿಗಳ
ನಿರಯದೊಳು ನೆಲೆಗೊಳಿಸಿ ಸಜ್ಜನ
ನೆರವಿಯನು ಪಾಲಿಸುವ ಔದುಂ
ಬರ ಸಲಹು ಸಲಹೆಮ್ಮ ಬಿಡದೆಲೆ ಪರಮಕರುಣದಲಿ ೩೨-೨೨

ಮಧುವಿರೋಧಿ ಮನೋಜ ಈರೋ
ದಧಿ ಮಥನ ಸಮಯದಲುದಿಸಿ ನೆರೆ

ಕುಧರಜಾವಲ್ಲಭನ ಮಸ್ತಕ ಮಂದಿರದಿ ಮೆರೆವ
ವಿಧು ತವಾಂಘ್ರಿ ಪಯೋಜಯುಗಳಕೆ
ಮಧುಪನಂದದಲೆರಗಲೆನ್ಮನ
ದಧಿಪ ವಂದಿಪೆನನುದಿನಂತಸ್ತಾಪ ಪರಿಹರಿಸು ೩೨-೨೩

ಶ್ರೀವನರುಹಾಂಬಕನ ನೇತ್ರಗ
ಳೇವೆ ಮನೆಯೆನಿಸಿ ಸುಜನರಿಗೆ ಕ
ರಾವಲಬನವೀವ ತೆರದಿ ಮಯೂಖ ವಿಸ್ತರಿಪ
ಆ ವಿವಸ್ವಾನ್ ಎಂದೆನಿಸುವ
ವಿ ಭಾವಸುವಹನಿಶೆಗಳಲಿ ಕೊಡ
ಲೀ ವಸುಂಧರೆಯೊಳು ವಿಪಶ್ಚಿತರರೊಡನೆ ಸು ಜ್ಞಾನ ೩೨-೨೪

ಲೋಕಮಾತೆಯ ಪಡೆದು ನೀ ಜಗ
ದೇಕ ಪಾತ್ರನಿಗಿತ್ತ ಕಾರಣ
ಶ್ರೀಕುಮಾರಿ ಸಮೇತ ನೆಲೆಸಿದ ನಿನ್ನ ಮಂದಿರದಿ
ಆ ಕಮಲಭವಮುಖರು ಬಿಡದೆ ಪ
ರಾಕೆನುತ ನಿಂದಿಹರೊ ಗುಣರ
ತ್ನಾಕರನೆ ಬಣ್ಣಿಸಲಳವೆ ಕೊಡು ಎಮಗೆ ಸನ್ಮನವ ೩೨-೨೫

ಫಣೆಯೊಳುಪ್ಪುವ ತಿಲಕ ತುಲಸೀ
ಮಣಿಗಣಾಂಚಿತ ಕಂಠ ಕರದಲಿ
ಕ್ವಣಿತ ವೀಣಾಸುಸ್ವರದಿ ಬಹು ತಾಳಗತಿಗಳಲಿ
ಪ್ರಣವಪ್ರತಿಪಾದ್ಯನ ಗುಣಂಗಳ

www.yousigma.com

ಕುಣಿಕುಣಿದು ಅತಿಸಂಭ್ರಮದಿ ಗಾ
ಯನವ ಮಾಡುವ ದೇವಋಷಿ ನಾರದರಿಗಭಿನಮಿಪೆ ೩೨-೨೬

ಆ ಸರಸ್ವತೀ ತೀರದಲಿ ಬಿ
ನ್ನೈಸಲಾ ಮುನಿಗಳ ನುಡಿಗೆ ಜಲ
ಜಾಸನ ಮಹೇಶಾಚ್ಯುತರ ಲೋಕಂಗಳಿಗೆ ಪೋಗಿ
ತಾ ಸಕಲ ಗುಣಗಳ ವಿಚಾರಿಸಿ
ಕೇಶವನೆ ಪರದೈವವೇಂದುಪ
ದೇಶಿಸಿದ ಭೃಗುಮುನಿಪ ಕೊಡಲೆಮಗಖಿಳ ಪುರುಷಾಥ ೩೨-೨೭

ಬಿಸರುಹಾಂಬಕನಾ ಜ್ಞೆಯಲಿ ಸುಮ
ನಸಮುಖನು ತಾನೆನಿಸಿ ನಾನಾ
ರಸಗಳುಳ್ಳ ಹವಿಸ್ಸುಗಳನವರವರಿಗೊಯಿದೀವ
ವಸುಕುಲಾಧಿಪ ಯ ಜ್ಞ ಪುರುಷನ
ಅಸಮಬಲ ರೂಪಂಗಳಿಗೆ ವಂ
ದಿಸುವೆ  ಜ್ಞಾನ ಯಶಸ್ಸು ವಿದ್ಯೆ ಸುಬುದ್ಧಿ ಕೊಡಲೆಮಗೆ ೩೨-೨೮

ತಾತನಪ್ಪಣೆಯಿಂದ ನೀ ಪ್ರ
ಖ್ಯಾತಿಯುಳ್ಳರವತ್ತು ಮಕ್ಕಳ
ಪ್ರೀತಿಯಿಂದಲಿ ಪಡೆದವರವರಿಗಿತ್ತು ಮನ್ನಿಸುವ
ವೀತಿಹೋತ್ರನ ಸಮಳೆನಿಸುವ ಪ್ರ
ಸೂತಿ ಜನನಿ ತ್ವದಂಘ್ರಿ ಕಮಲಕೆ
ನಾ ತುತಿಸಿ ತಲೆಬಾಗುವೆ ಎಮ್ಮ ಕುಟುಂಬ ಸಲಹುವುದು ೩೨-೨೯

ಶತಧೃತಿಯ ಸುತರೀವರುಳಿದ
ಪ್ರತಿಮ ಸುತಪೋನಿಧಿಗಳುಪರಾ
ಜಿತನ ಸುಸಮಾಧಿಯೊಳೊಲಿಸಿ ಮೂಲೊಕದೊಳೊ ಮೆರೆವ
ವ್ರತಿವರ ಮರೀಚ್ಯತ್ರಿ ಪುಲಹಾ
ಕ್ರತು ವಸಿಷ್ಠ ಪುಲಸ್ತ್ಯ
ವೈವಸ್ವತನು ವಿಶ್ವಾಮಿತ್ರ ರಂಗಿರರಂಘ್ರಿಗೆರಗುವೆನು ೩೨-೩೦

ದ್ವಾದಶಾದಿತ್ಯರೊಳು ಮೊದಲಿಗ
ನಾದ ಮಿತ್ರ ಪ್ರವಹ ಮಾನಿನಿ
ಯಾದ ಪ್ರಾವಹಿ ನಿರಖುತಿ ನಿಜರ ಗುರುಮಹಿಳೆ ತಾರ
ಈ ದಿವೌಕಸರನು ದಿನಾಧಿ
ವ್ಯಾಧಿಯುಪಟಳವಳಿದು ವಿಬುಧರಿ
ಗಾದರದಿ ಕೊಡಲಖಿಳ ಮಂಗಳವಾ ಕಾಲದಲಿ ೩೨-೩೧

ಮಾನನಿಧಿಗಳೆನಿಸುವ ವಿಷ್ವ
ಕ್ಸೇನ ಧನಪ ಗಜಾನನರಿಗೆ ಸ
ಮಾನರೆಂಭತ್ತೈದು ಶೇಷ ಶತಸ್ಥ ದೇವಗಣ
ಕಾನಮಿಸುವೆನು ಬಿಡದೆ ಮಿಥ್ಯಾ
ಜ್ಞ್ಯಾನ ಕಳೆದು ಸುಬೋಧವಿತ್ತು ಸ
ದಾನುರಾಗದಲೆಮಗೆ ಪರಿಪಾಲಿಸಲಿ ಸಂಪದವ ೩೨-೩೨

ಭೂತ ಮಾರುತವಾಂತರಭಿಮಾ

ನೀ ತಪಸ್ವಿ ಮರೀಚಿ ಮುನಿ ಪುರು
ಹೂತನಂದನ ಪಾದಮಾನಿ ಜಯಂತರೆಮಗೊಲಿದು
ಕಾತರವ ಪುಟ್ಟಿಸದೆ ವಿಷಯದಿ
ವೀತಭಯನ ಪದಾಬ್ಜದಲಿ ವಿ
ಪರೀತ ಬುದ್ಧಿಯನೀಯದೆ ಸದಾ ಪಾಲಿಸಲಿ ಎಮ್ಮ. ೩೨-೩೩

ಕುಲಋಷಿಗಳೆಂಭತ್ತು ಹೈಹಯ
ನಿಳೆಯ ಕಂಪನಗೈದ ಪೃಥು ಮಂ
ಗಳ ಪರೀಣತ ನಹುಷ ನಾಭಿ ಯಯಾತಿ ಶಶಿಬಿಂದು
ಬಲಿ ಮೊದಲು ಸಪ್ತೇಂದ್ರರಿವರಿಗೆ
ಕಲಿತ ಕಮಜ ದಿವಿಜರೆಂಬರು
ಉಳಿದ ಏಕಾದಶ ಮನುಗಳು ಉಚಥ್ಯ ಚ್ಯವನ ಮುಖ ೩೨-೩೪

ಓದಿಸುವ ಗುರುಗಳನೆ ಜರಿದು ಸ
ಹೋದರರಿಗುಪದೇಶಿಸಿದ ಮ
ಹದಾದಿಕಾರಣ ಸವಗುಣ ಸಂಪೂಣ ಹರಿಯೆಂದು
ವಾದಿಸುವ ತ್ವತ್ಪತಿಯ ತೋರೆಂ
ದಾದನುಜ ಬೆಸಗೊಳಲು ಸ್ಥಂ
ಭದಿ ಶ್ರೀದನಾಅಣ ತೋರಿಸಿದ ಪ್ರಹ್ಲಾದ ಸಲಹೆಮ್ಮ ೩೨-೩೫

ಶತಸಂಕೇತುಳ್ಳ ಪ್ರಿಯ
ವ್ರತ ಭರತ ಮಾಂಧಾತ ಪುಣ್ಯಾ
ಶ್ರಿತರು ಜಯ ವಿಜಯಾದಿಗಳು ಗಂಧವರೆಂಟು ಜನ

ಹುತವಹಜ ಪಾವಕ ಸನಾತನ
ಪಿತೃಗಳೇಳ್ವರು ಚಿತ್ರಗುಪ್ತರು
ಪ್ರತಿದಿನದಿ ಪಾಲಿಸಲಿ ತಮ್ಮವರೆಂದು ಎಮಗೊಲಿದು ೩೨-೩೬

ವಾಸವಾಲಯ ಶಿಲ್ಪಿ ವಿಮಲ ಜ
ಲಾಶಯಗಳೊಳು ರಮಿಪ ಊವಶಿ
ಭೇಶ ರವಿಗಳ ರಿಪುಗಳೆನಿಸುವ ರಾಹುಕೇತುಗಳು
ಶ್ರೀಶಪದ ಪಂಥಾನ ಧೂಮಾ
ಚೀಶ ದಿವಿಜರು ಕಮಜರಿಗೆ ಸ
ದಾ ಸಮಾನ ದಿವೌಕಸರು ಕೊಡಲೆಮಗೆ ಮಂಗಳವ ೩೨-೩೭

ದ್ಯುನದಿ ಶಾಮಲ ಸಂ ಜ್ಞುy ರೋಹಿಣಿ
ಘನಪ ಪಜನ್ಯಾನಿರುದ್ಧನ
ವನಿತೆ ಬ್ರಹ್ಮಾಂಡಾಭಿಮಾನಿ ವಿರಾಟದೇವಿಯರ
ನೆನೆವೆ ನಾ ನಲವಿಂದೆ ದೇವಾ
ನನ ಮಹಿಳೆ ಸ್ವಾಹಾಖ್ಯರಾಲೋ
ಚನೆ ಕೊಡಲಿ ನಿವಿಘ್ನದಿಂ ಭಗವದ್ಗುಣಂಗಳಲಿ ೩೨-೩೮

ವಿಧಿಪಿತನ ಪಾದಾಂಬುಜಗಳಿಗೆ
ಮಧುಪನಂದದಿ ವಿರಾಜಿಪಾಮಲ
ಉದಕಗಳಿಗೆ ಸದಾಭಿಮಾನಿಯು ಎಂದೆನಿಸಿಕೊಂಬ
ಬುಧಗೆ ನಾ ವಂದಿಸುವೆ ಸನ್ಮೋ
ದದಿ ನಿರಂತರ ಒಲಿದು ಎಮಗೆ

ಅಭ್ಯುದಯ ಪಾಲಿಸಲೆಂದು ಪರಮೋತ್ಸಹದಲನುದಿನದಿ ೩೨-೩೯

ಶ್ರೀ ವಿರಿಂಚಾದ್ಯರ ಮನಕೆ ನಿಲು
ಕಾವಕಾಲಕು ಜನನರಹಿತನ
ತಾವೊಲಿಸಿ ಮಗನೆಂದು ಮುದ್ದಿಸಿ ಲೀಲೆಗಳ ನೋಳ್ಪ
ದೇವಕಿಗೆ ವಂದಿಪೆ ಯಶೋದಾ
ದೇವಿಗಾನಮಿಸುವೆನು ಬಿಡದೆ ಕೃ
ಪಾವಲೋಕನದಿಂದ ಸಲುಹುವುದೆಮ್ಮ ಸಂತತಿಯ ೩೨-೪೦

ಪಾಮರರನು ಪವಿತ್ರಗೈಸುವ
ಶ್ರೀ ಮುಕುಂದನ ವಿಮಲ ಮಂಗಲ
ನಾಮಗಳಿಗಭಿಮಾನಿಯಾದ ಉಷಾಖ್ಯ ದೇವಿಯರು
ಭೂಮಿಯೊಳಗುಳ್ಳಖಿಳ ಸಜ್ಜನ
ರಾಮಯಾದಿಗಳಳಿದು ಸಲಹಲಿ
ಆ ಮರುತನ ಮನೆಯ ವೈದ್ಯರರಮಣಿಪ್ರತಿದಿನದಿ ೩೨-೪೧

ವನಧಿವಸನೆ ವರಾದ್ರಿ ನಿಚಯ
ಸ್ತನ ವಿರಾಜಿತೆ ಚೇತನಾಚೇ
ತನ ವಿಧಾರಕೆ ಗಂಧ ರಸ ರೂಪಾದಿ ಗುಣ ವಪುಷೆ
ಮುನಿಕುಲೋತ್ತಮ ಕಶ್ಯಪನ ನಿಜ
ತನುಜೆ ನಿನಗಾನಮಿಪೆ ಎನ್ನವ
ಗುಣಗಳೆಣಿಸದೆ ಪಾಲಿಪುದು ಪರಮಾತ್ಮನಧಾಂಗಿ ೩೨-೪೨

ಪುರುಟಲೋಚನ ನಿನ್ನ ಕದ್ದೊ
ಯ್ದಿರಲು ಪ್ರಾಥಿಸೆ ದೇವತೆಗಳು
ತ್ತರವ ಲಾಲಿಸಿ ತಂದ ವರಾಹರೂಪ ತಾನಾಗಿ
ಧರಣಿ ಜನನಿ ತ್ವತ್ಪದಾಬ್ಜಕೆ
ಎರಗಿ ಬಿನ್ನೈಸುವೆನು ಪಾದ
ಸ್ಪರುಷ ಮೊದಲಾದಖಿಳ ದೋಷಗಳೆಣಿಸದಿರು ಎಂದು   ೩೨-೪೩

ಹರಿಗುರುಗಳಚಿಸದ ಪಾಪಾ
ತ್ಮರನ ಶಿಕ್ಷಿಸಲೋಸುಗ ಶನ್ಯೈ
ಶರನೆನಿಸಿ ದುಷ್ಫಲಗಳೀವ ನಿರಂತರವು ಬಿಡದೆ
ತರಣಿನಂದನ ನಿನ್ನ ಪಾದಾಂ
ಬುರುಹಗಳಿಗಾನಮಿಪೆ ಬಹು ದು
ಸ್ತರಭವಾಣವ ಮಗ್ನನಾದೆನ್ನನುದ್ಧರಿಸಬೇಕು ೩೨-೪೪

ನಿರತಿಶಯ ಸು ಜ್ಞಾನ ಪೂವಕ
ವಿರಚಿಸುವ ನಿಷ್ಕಾಮ ಕಮಗ
ಳರಿತು ತತ್ತತ್ಕಲದಲಿ ತಜ್ಜನ್ಯಫಲರಸವ
ಹರಿಯ ನೇಮದ ಲುಣಿಸಿ ಬಹುಜೀ
ವರಿಗೆ ಕಮಪನೆನಿಪ ಗುರು ಪುಷ್
ಕರನು ಸತ್ಕ್ರಿಯಂಗಳಲಿ ನಿವಿಘ್ನತೆಯಕೊಡಲಿ  ೩೨-೪೫

ಶ್ರೀನಿವಾಸನ ಪರಮ ಕಾರು

www.yousigma.com

ಣ್ಯಾನಿವಾಸಸ್ಥಾನರೆನಿಪ ಕೃ
ಶಾನುಜರು ಸಹಸ್ರಷೋಡಶಶತರು ಶ್ರೀಕೃಷ್ಣ
ಮಾನಿನಿಯರೆಪ್ಪತ್ತು ಯುಕ್ತರು
ದಾನವರು ಮೂವತ್ತು ಚಾರಣ
ಜಾನಜಾಮರಪ್ಸರರು ಗಂಧವರಿಗೆ ನಮಿಪೆ ೩೨-೪೬

ಆ ಯಮುನೆಯೊಳು ಸಾದರದಿ
ಕಾತ್ಯಯನೀ ವ್ರತ ಧರಿಸಿ ಕೆಲರು ದ
ರಾಯುಧನೆ ಪತಿಯೆನಿಸಿ ಕೆಲವರು ಜಾರತನದಲ್ಲಿ
ವಾಯುಪಿತನೊಲಿಸಿದರು ಈಬಗೆ
ತೋಯಸರಸರ ಪಾದಕಮಲಕೆ
ನಾ ಯೆರಗುವೆ ಮನೋರಥಂಗಳ ಸಲಿಸಲನುದಿನವು ೩೨-೪೭

ಕಿನ್ನರರು ಗುಹ್ಯಕರು ರಾಅಸ
ಪನ್ನಗರು ಪಿತೃಗಳು ಸಿದ್ಧರು
ಸನ್ನುತಾಜಾನಜರು ಸಮರಿವರಮರ ಯೋನಿಜರು
ಇನ್ನಿವರ ಗಣವೆಂತು ಬಣ್ಣಿಸ
ಲೆನ್ನಳವೆ ಕರುಣದಲಿ ಪರಮಾ
ಪನ್ನಜರಿಗೆ ಕೊಡಲಿ ಸನ್ಮುದ ಸುಪ್ರತಾಪವನು ೩೨-೪೮

ನೂರು ಮುನಿಗಳುಳಿದು ಮೇಲಣ
ನೂರು ಕೋಟಿ ತಪೋಧನರ ಪಾ
ದಾರವಿಂದಕೆ ಮುಗಿವೆ ಕರಗಳನುದ್ಧರಿಸಲೆಂದು

www.yousigma.com

ಮೂರು ಸಪ್ತ ಶತಾಹ್ವಯರ ತೋರೆ
ದೀ ಋಷಿಗಳಿಗಾನಂತರದಲಿಹ
ಭೂರಿ ಪಿತೃಗಳು ಕೊಡಲಿ ಎಮಗೆ ಸದಾ ಸುಮಂಗಳವ೩೨-೪೯

ಪಾವನಕೆ ಪಾವನನೆನಿಸುವ ರ
ಮಾವಿನೋದನ ಗುಣಗಣಂಗಳ
ಸಾವಧಾನದಲೇಕ ಮಾನಸರಾಗಿ ಸುಸ್ವರದಿ
ಆ ವಿಬುಧಪತಿ ಸಭೆಯೊಳಗೆ ನಾ
ನಾವಿಲಾಸದಿ ಪಾಡಿ ಸುಖಿಸುವ
ದೇವಗಂಧವರು ಕೊಡಲಿ ಎಮಗಖಿಳ ಪುರುಷಾಥ ೩೨-೫೦

ಭುವನ ಪಾವನನೆನಿಪ ಲಕುಮೀ
ಧವನ ಮಂಗಳ ದಿವ್ಯನಾಮ
ಸ್ತವನಗೈವ ಮನುಷ್ಯಗಂಧವರಿಗೆ ವಂದಿಸುವ
ಪ್ರವರ ಭೂಭುಜರುಳಿದು ಮಧ್ಯಮ
ಕುವಲಯಪರೆಂದೆನಿಸಿಕೋಂಬರ
ದಿವಸದಿವಸಂಗಳಲಿ ನೆನೆವೆನು ಕರಣ ಶುದ್ಧಿಯಲಿ ೩೨-೫೧

ಶ್ರೀ ಮುಕುಂದನ ಮೂತಿಗಳ ಸೌ
ದಾಮಿನಿವೋಲ್ ಹೃದಯವಾರಿಜ
ವ್ಯೋಮ ಮಂಡಲ ಮಧ್ಯದಲಿ ಕಾಣುತಲಿ ಮೋದಿಸುವ
ಆ ಮಾನುಷ್ಯೋತ್ತಮರ ಪದಯುಗ
ತಾಮರಸಗಳಿಗೆರಗುವೆ ಸದಾ

ಕಾಮಿತಾಥಗಳಿತ್ತು ಸಲಹಲಿ ಪ್ರಣತಜನತತಿಯ ೩೨-೫೨

ಈ ಮಹೀಮಂಡಲದೊಳಿಹ ಗುರು
ಶ್ರೀಮದಾಚಾಯರ ಮತಾನುಗ
ರಾ ಮಹಾ ವೈಷ್ಣವರ ವಿಷ್ಣು ಪಾದಾಬ್ದ ಮಧುಕರರ
ಸ್ತೋಮಕಾನಮಿಸುವೆನವರವರ
ನಾಮಗಳ ಪೇಳಲಳವೆ ಬಹುವಿಧ
ಯಾಮ ಯಾಮಂಗಳಲಿ ಬೋಧಿಸಲೆನಗೆ ಸನ್ಮತಿಯ ೩೨-೫೩

ಮಾರನಯ್ಯನ ಕರುಣಪಾರಾ
ವಾರ ಮುಖ್ಯ ಸುಪಾತ್ರರೆನಿಪ ಸ
ರೋರುಹಾಸನ ವಾಣಿ ಋದ್ರೇಂದ್ರಾದಿ ಸುರನಿಕರ
ತಾರತಮ್ಯತ್ಮಕ ಸುಪದ್ಯಗ
ಳಾರು ಪಠಿಸುವರಾ ಜನರಿಗೆ ರ
ಮಾರಮಣ ಪೂರೈಸಲೀಪ್ಸಿತ ಸವಕಾಲದಲಿ ೩೨-೫೪

ಮೂರು ಕಾಲಂಗಳಲಿ ತುತಿಸೆ ಶ
ರೀರ ವಾಕ್ಮನ ಶುದ್ಧಿ ಮಾಳ್ಪುದು
ದೂರಗೈಸುವುದಖಿಳ ಪಾಪಸಮೂಹ ಪ್ರತಿದಿನವು
ಚೋರಭಯ ರಾಜಭಯ ನಕ್ರ ಚ
ಮೂರ ಶಸ್ತ್ರ ಜಲಾಗ್ನಿ ಭೂತ ಮ
ಹೋರಗ ಜ್ವರ ನರಕಭಯ ಸಂಭವಿಸದೆಂದೆಂದು ೩೨-೫೫

ಜಯ ಜಯತು ತ್ರಿಜಗದ್ವಿಲಅಣ
ಜಯಜಯತು ಜಗದೇಕ ಕಾರಣ
ಜಯಜಯತು ಜಾನಕೀರಮಣ ನಿಗತಜರಾಮರಣ
ಜಯಜಯತು ಜಾನ್ವವಿ ಜನಕ ಜಯ
ಜಯತು ದೈತ್ಯಕುಲಾಂತಕ ಭವಾ
ಮಯಹರ ಜಗನ್ನಾಥವಿಟ್ಠಲ ಪಾಹಿಮಾಂ ಸತತ ೩೨-೫೬

www.yousigma.com